ಓ ಎಸ್ ನಂಃ 59/2022
ಪಿಡಬ್ಲ್ಯೂ.1 (ಬಸಲಿಂಗಪ್ಪ)

ದಿನಾಂಕ:28-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಬಿ ಎಸ್ ವಕೀಲರಿಂದಃ

4. ನನಗೆ ಈಗ 21 ವರ್ಷ ವಯಸ್ಸಾಗಿರುತ್ತದೆ. 2009 ರಲ್ಲಿ ನನ್ನ ವಯಸ್ಸು ಸುಮಾರು 6-7 ವರ್ಷ ಇತ್ತು ಎಂದರೆ ಸರಿ. ಆದ್ದರಿಂದ ನನ್ನ ಅಜ್ಜಿ ಮತ್ತು ಅತ್ತೆ ಅವರ ಪಾಲಿನ ಆಸ್ತಿಯ ಹಕ್ಕು ಬಿಟ್ಟುಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಿಃ25/9/2009 ರಂದು ನನ್ನ ಅಜ್ಜಿ ಮತ್ತು ಅತ್ತೆ ಆಸ್ತಿಗಳಲ್ಲಿ ನನಗೆ ಹಕ್ಕು ಬೇಡವೆಂದು ಆಸ್ತಿಯ ಹಕ್ಕನ್ನು ನನ್ನ ತಂದೆಗೆ ಬಿಟ್ಟುಕೊಡಲು ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿಯೊಂದಿಗೆ ನನ್ನ ಅಜ್ಜಿ ಮತ್ತು ಅತ್ತೆ ಗ್ರಾಮಲೆಕ್ಕಾಧಿಕಾರಿಯ ಸಮಕ್ಷಮ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇರೆಗೆ ಎಂ ಆರ್ 25/2009-10 ರಂತೆ ದಿಃ29/09/2009 ರಂದು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿಯನ್ನು ಸಲ್ಲಿಸಿ ಎಂ ಆರ್ ಆದೇಶವಾದ ನಂತರ ನನ್ನ ತಂದೆಯೇ ಪೂರ್ಣ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತರಾಗುವವರೆಗೆ ಅವರೇ ಸಂಪೂರ್ಣ ಆಸ್ತಿಯನ್ನು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲರೂ ಒಟ್ಟಿಗೆ ಇದ್ದೇವು. ನನ್ನ ಸಹೋದರಿಯರಿಗೆ ಹೆಚ್ಚಿನ ಪಾಲು ಹೋಗುತ್ತದೆ ಎಂದು ನನ್ನ ಅತ್ತೆ ಮತ್ತು ಅಜ್ಜಿ ಆಸ್ತಿಯನ್ನು ಬಿಟ್ಟುಕೊಟ್ಟಿದ್ದರೂ ಸಹ ನ್ಯಾಯಾಲಯದಲ್ಲಿ ಬಿಟ್ಟು ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶ್ರೀಮತಿ ದೀಪಾ ಜಿ.)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ